11

# ಪರಿಶುದ್ಧಾತ್ಮ ಮತ್ತು ಬಾಪ್ತಿಸ್ಮ

*"ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು" (1 ಕೊರಿಂಥ 12:13).*

ಹೊಸದಾಗಿ ಹುಟ್ಟುವದರಲ್ಲಿ ಪರಿಶುದ್ಧಾತ್ಮನ ಕಾರ್ಯದ ಬಗ್ಗೆ "ಯೇಸುವು ಬಾಪ್ತಿಸ್ಮವನ್ನು ಬೋಧಿಸಿದನು" ಎಂಬ ಪಾಠದಲ್ಲಿ ಯೋಹಾನ 3:3-5ರ ಚರ್ಚೆಯಲ್ಲಿ ಪರೀಕ್ಷಿಸಲ್ಪಟ್ಟಿದೆ. ಈಗ ಯೋಚಿಸಲಿಕ್ಕಿರುವಂಥದ್ದು ಬಾಪ್ತಿಸ್ಮಕ್ಕೆ ಸಂಬಂಧದಲ್ಲಿ ಪರಿಶುದ್ಧಾತ್ಮ ಎಂಬ ವರದ ಅಧ್ಯಯನವಾಗಿದೆ.

ಬಾಪ್ತಿಸ್ಮದಲ್ಲಿ ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟುತ್ತಾನೆ (ಯೋಹಾನ 3:5), ಸತ್ತವನಾಗಿದ್ದವನು ಪಾಪದಿಂದ ಸ್ವತಂತ್ರವಾದ ನೂತನ ಜೀವಕ್ಕೆ ಬರುವನು (ರೋಮಾಪುರ 6:4-7) ಮತ್ತು ಯೇಸುವಿನ ಮರಣ ಹಾಗೂ ಪುನರುತ್ಥಾನವನ್ನು ಬಾಪ್ತಿಸ್ಮದಲ್ಲಿ ಹಂಚಿಕೊಳ್ಳುವದರಿಂದ (ಕೊಲೊಸ್ಸೆ 2:12, 13) ಕ್ಷಮಿಸಲ್ಪಡುವನು (ಅಪೊಸ್ತಲರ ಕೃತ್ಯ 2:38). ಜಗತ್ತಿನಲ್ಲೆಲ್ಲಾ ಸುವಾರ್ತೆಯು ಪ್ರಸಾರವಾಗಲು ಪ್ರಾರಂಭಿಸಿದಂತೆ ಬಾಪ್ತಿಸ್ಮದ ಸಾಕಷ್ಟು ಉದಾಹರಣೆಗಳು ಅಪೊಸ್ತಲರ ಕೃತ್ಯಗಳಲ್ಲಿ ಕೊಡಲ್ಪಟ್ಟಿವೆ (ಅಪೊಸ್ತಲರ ಕೃತ್ಯ 2:38-47; 8:12, 35-39 ಇತ್ಯಾದಿ).

ಒಬ್ಬನು ಕ್ರಿಸ್ತನಲ್ಲಿ ನೂತನ ಸೃಷ್ಟಿಯಾಗುವನು (2 ಕೊರಿಂಥ 5:17; ಗಲಾತ್ಯ 6:15) ಹಾಗೂ ಹೃದಯದಿಂದ ತನ್ನ ನಂಬಿಕೆ ಮತ್ತು ವಿಧೇಯತೆಯ ನಿಮಿತ್ತವಾಗಿ ಬಾಪ್ತಿಸ್ಮದಲ್ಲಿ ದೇವರ ಮಗುವಾಗುವನು (ರೋಮಾಪುರ 6:4, 17, 18; ಗಲಾತ್ಯ 3:26, 27; ಕೊಲೊಸ್ಸೆ 2:12, 13). ಒಬ್ಬನು ಯೇಸುವಿನಲ್ಲಿ ನಂಬಿಕೆಯನ್ನಿಡುವದರಿಂದ ಅವನು ತನ್ನ ಪಾಪಗಳಿಂದ ಶುದ್ಧೀಕರಿಸಲ್ಪಟ್ಟಿರುವನು. ಹೊಸದಾಗಿ ಹುಟ್ಟಿದವನು ದೇವರ ಮಗುವಾಗಿರುವನು, ಪರಿಶುದ್ಧಾತ್ಮನನ್ನು ಹೊಂದಿಕೊಂಡಿರುವನು, "ಆದರೆ ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪರಿಶುದ್ಧಾತ್ಮನನ್ನು ಕುರಿತು ಹೇಳಿದನು" (ಯೋಹಾನ 7:39). "ಈ ಕಾರ್ಯಗಳಿಗೆ ನಾವು ಸಾಕ್ಷಿ; ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪರಿಶುದ್ಧಾತ್ಮನೂ ಸಾಕ್ಷಿ" (ಅಪೊಸ್ತಲರ ಕೃತ್ಯ 5:32; ಹೋಲಿಸು. 1 ಥೆಸಲೋನಿಕ 4:8) ಎಂದೂ ಓದುವೆವು. ಪಂಚಾಶತ್ತಮ ದಿನದಂದು ಮೊದಲನೆಯ ಸುವಾರ್ತಾ ಪ್ರಸಂಗ ಕೇಳಿದವರಿಗೆ ಪೇತ್ರನು ಹೀಗೆ ಹೇಳಿದನು, "ಮಾನಸಾಂತರಪಟ್ಟು, ಪಾಪಗಳು ಕ್ಷಮಿಸಲ್ಪಡುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ಯೇಸು ಕ್ರಿಸ್ತನ ಹೆಸರಿನಲ್ಲಿ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ಆಗ ನೀವು ಪರಿಶುದ್ಧಾತ್ಮ ಎಂಬ ವರವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯ 2:38). ನೀವು ಪುತ್ರರಾಗಿರುವುದರಿಂದ, " 'ಅಪ್ಪಾ, ತಂದೆಯೇ!' ಎಂದು ಮೊರೆಯಿಡುವ ತನ್ನ ಕುಮಾರನ ಆತ್ಮವನ್ನು ದೇವರು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" (ಗಲಾತ್ಯ 4:6) ಎಂದು ಪೌಲನು ಬರೆದನು.

"ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪರಿಶುದ್ಧಾತ್ಮನೇ ನಮ್ಮ ಆತ್ಮದೊಂದಿಗೆ

ಸಾಕ್ಷಿ ಹೇಳುತ್ತಾನೆ" (ರೋಮಾಪುರ 8:16). ನಾವು ದೇವರ ಮಕ್ಕಳಾಗಿದ್ದೇವೆಂದು ನಮ್ಮ ಆತ್ಮಕ್ಕೆ ಅವನು ಸಾಕ್ಷಿ ಹೇಳುವದಿಲ್ಲ. ಆದರೆ ಅದರ ಬದಲು ನಾವು ದೇವರ ಮಕ್ಕಳಾಗಿದ್ದೇವೆಂದು ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳಿದ್ದಾನೆ. ಅದರ ಅರ್ಥ "ನಮ್ಮ ತಂದೆಯೇ" ಎಂದು ನಾವು ಹೇಳುವಾಗ ದೇವರು ನಿಜವಾಗಿಯೂ ನಮ್ಮ ತಂದೆಯಾಗಿದ್ದಾನೆ ಎಂದು ನಮ್ಮೊಂದಿಗೆ ಆತನು ಸಾಕ್ಷಿ ಕೊಡುತ್ತಾನೆ ಎಂಬುದು.

ದೇವರ ಮಕ್ಕಳು ದೇವರಿಗೆ ಸಂದುವರೆಂಬ ಭರವಸೆಗಾಗಿ ಪರಿಶುದ್ಧಾತ್ಮನಿಂದ ಮುದ್ರಿಸಲ್ಪಟ್ಟಿದ್ದಾರೆ. "ಕ್ರಿಸ್ತನಲ್ಲಿ ನಿಮ್ಮೊಂದಿಗೆ ನಮ್ಮನ್ನು ಸ್ಥಿರಪಡಿಸಿ ನಮ್ಮನ್ನು ಅಭಿಷೇಕಿಸಿದಾತನು ದೇವರೇ, ಆತನು ನಮ್ಮ ಮೇಲೆ ಮುದ್ರೆ ಹಾಕಿ ನಮ್ಮ ಹೃದಯಗಳಲ್ಲಿ ಆತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ" (2 ಕೊರಿಂಥ 1:21, 22), ಹಾಗೂ "ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯ ವಾಕ್ಯವನ್ನು ಕೇಳಿ - ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪರಿಶುದ್ಧಾತ್ಮನಿಂದ ಮುದ್ರಿಸಲ್ಪಟ್ಟಿರುವಿರಿ ... ಈ ಆತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ, ..." (ಎಫೆಸ 1:13, 14) ಎಂದು ಪೌಲನು ಬರೆದಿದ್ದಾನೆ.

ತನ್ನವರೆಂದು ಮುದ್ರೆ ಹಾಕಲು ದೇವರ ಮಕ್ಕಳಿಗೆ ಪರಿಶುದ್ಧಾತ್ಮನು ಕೊಡಲ್ಪಟ್ಟಿದ್ದಾನೆ (ಗಲಾತ್ಯ 4:6), ಆದರೆ ಅವರನ್ನು ಮಕ್ಕಳನ್ನಾಗಿ ಮಾಡಲು ಅಲ್ಲ. "ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ" (ರೋಮಾಪುರ 8:9).

ಒಂದು ಸಾಮಾನ್ಯ ನಿಯಮವು ಸ್ಥಾಪಿಸಲ್ಪಟ್ಟಿದೆ. ಲೋಕದಲ್ಲಿ ನಶಿಸು ಹೋದವರು ಪರಿಶುದ್ಧಾತ್ಮನನ್ನು ಸ್ವೀಕರಿಸಲಾರರು (ಯೋಹಾನನ 14:17) ಆದರೆ ನಂಬುವವರಿಗೆ, ವಿಧೇಯರಾಗುವವರಿಗೆ, ದೇವರ ಮಕ್ಕಳಾಗಿರುವವರಿಗೆ ಆತನು ಕೊಡಲ್ಪಡುವನು.

## ಪರಿಶುದ್ಧಾತ್ಮ ಎಂಬ ವರ

ದೇವರ ಮಕ್ಕಳಿಗೆ ಕೊಡಲ್ಪಟ್ಟ "ಪರಿಶುದ್ಧಾತ್ಮ ಎಂಬ ವರವು" ಆಂತರ್ಯದಲ್ಲಿ ಆತ್ಮನ ವಾಸಿಸುವಿಕೆಯಾಗಿದೆ (1 ಕೊರಿಂಥ 6:19, 20; 2 ತಿಮೊಥೆ 1:14). ಆದರೆ ಆತ್ಮನ ಅದ್ಭುತಕರವಾದ ಬಲಪಡಿಸುವಿಕೆಯ ವರವಲ್ಲ. ಆತ್ಮನು ಆಂತರ್ಯದಲ್ಲಿ ವಾಸಿಸುವ ವರವು ಕ್ರೈಸ್ತರಿಗೆ ಕ್ರೈಸ್ತ ಜೀವಿತವನ್ನು ಜೀವಿಸಲು ಬಲವನ್ನು ಕೊಡುತ್ತದೆ (ಎಫೆಸ 3:16). ಆತ್ಮನ ಅದ್ಭುತಕರವಾದ ಬಲಪಡಿಸುವಿಕೆಯ ವರವನ್ನು ಹೊಂದಿದವರು ಅದ್ಭುತ ಕಾರ್ಯಗಳನ್ನು, ಸೂಚಕ ಕಾರ್ಯಗಳನ್ನು ಮಾಡುವುದಕ್ಕೆ ಬಲಪಡಿಸುವ ಆತ್ಮನ ವರದಿಂದ ಬಲವನ್ನು ಹೊಂದಿದರು (ಇಬ್ರಿಯ 2:3, 4).

ಅಪೊಸ್ತಲರ ಕೃತ್ಯ 8:12-17, ನಿಯಮಕ್ಕೆ ಹೊರತಾದದ್ದಾಗಿರುವದಿಲ್ಲ:

> ... ಸಮಾರ್ಯದವರು ದೇವರ ವಾಕ್ಯವನ್ನು ಸ್ವೀಕರಿಸಿದ ವರ್ತಮಾನವನ್ನು ಯೆರೂಸಲೇಮಿನಲ್ಲಿದ್ದ ಅಪೊಸ್ತಲರು ಕೇಳಿ ಪೇತ್ರ ಯೋಹಾನರನ್ನು ಅವರ ಬಳಿಗೆ ಕಳುಹಿಸಿದರು. ಇವರು ಅಲ್ಲಿಗೆ ಬಂದು ಪರಿಶುದ್ಧಾತ್ಮನನ್ನು ಅವರು ಹೊಂದಬೇಕೆಂದು ಅವರಿಗೋಸ್ಕರ ಪ್ರಾರ್ಥನೆ ಮಾಡಿದರು. ಯಾಕಂದರೆ ಪರಿಶುದ್ಧಾತ್ಮನು ಅವರಲ್ಲಿ ಒಬ್ಬನ ಮೇಲಾದರೂ ಇನ್ನೂ ಬಂದಿರಲಿಲ್ಲ. ಅವರು ಕರ್ತನಾದ ಯೇಸುವಿನ ಹೆಸರಿನಲ್ಲಿ ಬಾಪ್ತಿಸ್ಮವನ್ನು ಮಾತ್ರ ಮಾಡಿಸಿಕೊಂಡಿದ್ದರು. ಅಪೊಸ್ತಲರು ಅವರ ಮೇಲೆ ಕೈಗಳನ್ನಿಡಲು ಅವರು ಪರಿಶುದ್ಧಾತ್ಮನನ್ನು ಹೊಂದಿದರು.

ಸಮಾರ್ಯದವರು ಬಾಪ್ತಿಸ್ಮ ಹೊಂದಿದಾಗ ಸಾಮಾನ್ಯ ನಿಯಮವಾಗಿ ದೇವರ

ಮಕ್ಕಳಾಗಿ ಆಂತರ್ಯದಲ್ಲಿ ವಾಸಿಸುವ ಪರಿಶುದ್ಧಾತ್ಮನನ್ನು ಅವರು ಸ್ವೀಕರಿಸಿದರು: ಅವರು ಕೂಡಲೇ ಆತ್ಮನಿಂದ ಬಲಪಡಿಸಲ್ಪಡಲಿಲ್ಲ. ಅನಂತರದಲ್ಲಿ, ಅಪೊಸ್ತಲರು ಹಸ್ತಗಳನ್ನಿಡುವದರ ಮುಖಾಂತರ ಆತನು ಅವರಿಗೆ ಕೊಡಲ್ಪಟ್ಟನು (ಹೋಲಿಸು. ಅಪೊಸ್ತಲರ ಕೃತ್ಯ 19:5, 6).

ಪೌಲನ ಹಸ್ತಗಳು ಇಡಲ್ಪಡುವದರ ಮುಖಾಂತರ "through" ಇಲ್ಲವೇ ಇಡಲ್ಪಡುವದರಿಂದ "by" ತಿಮೊಥೆಯನು ವರವನ್ನು ಹೊಂದಿದನು (2 ತಿಮೊಥೆ 1:6) (*dia* ಗ್ರೀಕ್ ಉಪಸರ್ಗಾವ್ಯಯ ಷಷ್ಠೀ ವಿಭಕ್ತಿಯೊಂದಿಗೆ ಉಪಯೋಗಿಸಲ್ಪಡುವಾಗ ಇನ್ನೊಂದು ಕಾರ್ಯದಿಂದ ಸಾಧನದ ಮಾಧ್ಯಮದ ಅರ್ಥ ಕೊಡುತ್ತದೆ). ಇದು ಬಹುಶಃ ಹಿರಿಯರ ಹಸ್ತಗಳಿಂದ "with" (- *meta* ಷಷ್ಠೀ ವಿಭಕ್ತಿಯೊಂದಿಗೆ ಉಪಸರ್ಗಾವ್ಯಯದ ಅರ್ಥ "in accompaniment with" ಎಂದಾಗುವುದು) ಕೊಡಲ್ಪಟ್ಟ ವರವಾಗಿರುವ ಸಾಧ್ಯತೆಯಾಗಿದೆ (1 ತಿಮೊಥೆ 4:14). ಒಳ್ಳೆ ಕಾರಣಕ್ಕಾಗಿ ತಿಮೊಥೆಯನು ಹೇಗೆ ವರವನ್ನು ಸ್ವೀಕರಿಸಿದನೆಂಬುದನ್ನು ವಿವರಿಸುವಲ್ಲಿ ಎರಡು ಭಿನ್ನವಾದ ಉಪಸರ್ಗಾವ್ಯಗಳನ್ನು ಪೌಲನು ಉಪಯೋಗಿಸಿದ್ದಾನೆ. ಯೇಸುವು ಪೌಲನ ಹಸ್ತಗಳ ಮಾಧ್ಯಮದ ಮುಖಾಂತರ ಹಾಗೂ ಹಿರಿಯರ ಹಸ್ತಗಳನ್ನೊಳಗೊಂಡು ತಿಮೊಥೆಯನಿಗೆ ವರವನ್ನು ಕೊಟ್ಟನು. ಪೌಲನ ಹಸ್ತಗಳು ವರವು ಕೊಡಲ್ಪಡಲು ಮಾಧ್ಯಮವಾಗಿತ್ತು. ಪೌಲನೊಂದಿಗೆ ಹಿರಿಯರು ತಿಮೊಥೆಯನಿಗೆ ವರವನ್ನು ಉಪಯೋಗಿಸಲು ನೇಮಿಸುವದಕ್ಕೆ ತಮ್ಮ ಹಸ್ತಗಳನ್ನಿಟ್ಟರು.

## ಅನ್ಯ ಜನಾಂಗದಿಂದ ಮೊದಲು ಪರಿವರ್ತನೆ ಹೊಂದಿದವರು

ಅಪೊಸ್ತಲರ ಕೃತ್ಯ 10 ಮತ್ತು 11ರಲ್ಲಿ ಅನ್ಯರಿಂದ ಪ್ರಥಮವಾಗಿ ಪರಿವರ್ತನೆ ಹೊಂದಿದ್ದರಲ್ಲಿ ಸಾಮಾನ್ಯ ನಿಯಮಕ್ಕೆ ಅಪವಾದವನ್ನು ಕಂಡುಕೊಳ್ಳುತ್ತೇವೆ. ಒಂದು ವಿಷಯವನ್ನು ಸಿದ್ಧಪಡಿಸಿ ತೋರಿಸಲು ಹೆಚ್ಚಾದ ಅಪವಾದಗಳು ಮುಖ್ಯವಾದವುಗಳಾಗಿವೆ. ಇದು ಯೇಸುವಿನ ಅದ್ಭುತಗಳೊಂದಿಗೆ ಸತ್ಯವಾಗಿದೆ. ಸರಾಸರಿ ಸಾಮಾನ್ಯವಾದ ವ್ಯಕ್ತಿಯು ಮಾಡಲು ಶಕ್ತನಾದ ಕೇವಲ ಆ ಸಂಗತಿಗಳನ್ನು ಮಾತ್ರವೇ ಆತನು ಮಾಡಿದ್ದರೆ, ಆತನು ತಾನು ದೇವರ ಕುಮಾರನು ಎಂಬುದನ್ನು ಸಿದ್ಧಪಡಿಸಿ ತೋರಿಸಲಿಕ್ಕಾಗುತ್ತಿರಲಿಲ್ಲ. ಮನುಷ್ಯನು ತನ್ನ ಸ್ವಾಭಾವಿಕ ಸಾಮರ್ಥ್ಯದಿಂದ ಮಾಡಲಾಗದಂಥ ನೈಸರ್ಗಿಕ ವಿಧಾನಕ್ಕೆ ಅಪವಾದವಾಗಿರುವ ಸಂಗತಿಗಳು ಮಾಡುವದರಿಂದ ಆತನು ತನ್ನನ್ನು ದೇವರ ಕುಮಾರನಾಗಿದ್ದೇನೆಂದು ಸಿದ್ಧಪಡಿಸಿ ತೋರಿಸಿದನು (ಯೋಹಾನ 20:30, 31; ಅಪೊಸ್ತಲರ ಕೃತ್ಯ 2:22).

ಅಪವಾದವನ್ನುಉಪಯೋಗಿಸುವದರಿಂದ, ದೇವರುತಾನುಅನ್ಯಜನಾಂಗದವರನ್ನು ರಕ್ಷಣೆಗಾಗಿ ಸ್ವೀಕರಿಸುವನೆಂದು ಮತ್ತು ಅಬ್ರಹಾಮನ ಸಂತತಿಯನ್ನು ಅದೇ ಮಟ್ಟದಲ್ಲಿಡುವನೆಂದು ಸಿದ್ಧಪಡಿಸಿ ತೋರಿಸಿದನು. ಈ ಸತ್ಯವು ಯೆಹೂದ್ಯರಿಗೆ ಸ್ವೀಕರಿಸಲು ಕಷ್ಟಕರವಾದದ್ದಾಗಿತ್ತು. ಸಾಮಾನ್ಯವಾದ ವಿಧಾನವು - ಅಪೊಸ್ತಲರು ಹಸ್ತಗಳನ್ನಿಡುವದರ ಮುಖಾಂತರ ಪರಿಶುದ್ಧಾತ್ಮನ ಬಲಪಡಿಸುವಿಕೆಯು ಕೊಡಲ್ಪಡುವಂಥದ್ದು - ಅನ್ಯರು ತಮ್ಮ ಪಾಪಗಳ ಕ್ಷಮಾಪಣೆ ಹೊಂದಿದ್ದರೂ ಯೆಹೂದ್ಯರಿಂದ ಪರಿವರ್ತನೆ ಗೊಂಡವರಂತೆ ಕ್ರೈಸ್ತ ಸಮಾಜದಲ್ಲಿ ಅದೇ ಸ್ಥಾನದಲ್ಲಿರಬೇಕೋ ಎಂಬುದಕ್ಕೆ ಸಾಕಷ್ಟು ರುಜುವಾತು ಆಗಿರಬೇಕು. ಯಾವ ವ್ಯತ್ಯಾಸವಿಲ್ಲದೆ ಅನ್ಯಜನಾಂಗದವರಿಂದ ಪರಿವರ್ತನೆ ಹೊಂದಿದವರು ಸ್ವೀಕರಿಸಲ್ಪಡಬೇಕು ಎಂಬುದು ಅಪೊಸ್ತಲರಿಗೆ ಸರಿಯಾಗಿ ತೋರಿತು. ನೇರವಾಗಿ ಮತ್ತು ಯಾವುದೇ ಮಾಧ್ಯಮವಿಲ್ಲದೆ ದೇವರು ಪ್ರಾರಂಭದಲ್ಲಿ

ಯೆಹೂದ್ಯರಿಗೆ ಪರಿಶುದ್ಧಾತ್ಮನನ್ನು ಕೊಟ್ಟಂತೆ ಅನ್ಯಜನಾಂಗಗಳಿಗೆ ಪರಿಶುದ್ಧಾತ್ಮನನ್ನು ಕೊಡುವದರಿಂದ, ಎಲ್ಲಾ ಕಾಲಗಳಲ್ಲಿ ಅನ್ಯ ಜನಾಂಗಗಳವರಿಗೆ ರಕ್ಷಣೆಯು ಕೊಡಲ್ಪಡಬೇಕು ಮತ್ತು ದೇವರ ಎಲ್ಲಾ ಮಕ್ಕಳೂ ಸಮಾನರಾಗಿದ್ದರು ಎಂಬುದನ್ನು ತೋರಿಸಿದನು. ಆಯ್ಕೆಯು ತನ್ನದು, ಆದರೆ ಪೇತ್ರನದಲ್ಲ ಎಂದು ದೇವರು ಸ್ಪಷ್ಟಪಡಿಸಿದನು.

ಯೆರೂಸಲೇಮಿನಲ್ಲಿಯ ಸಭೆಯಿಂದ ಎತ್ತಲ್ಪಟ್ಟ ಆಕ್ಷೇಪಣೆಗಳಿಗೆ ಉತ್ತರವಾಗಿ (ಅಪೊಸ್ತಲರ ಕೃತ್ಯ 11:3), ಪೇತ್ರನು, "... ದೇವರನ್ನು ತಡೆಯುವದಕ್ಕೆ ನಾನು ಶಕ್ತನೋ?" (ಅಪೊಸ್ತಲರ ಕೃತ್ಯ 11:17) ಎಂದು ಸರಿಯಾಗಿ ಪ್ರಶ್ನೆ ಕೇಳಿದನು. ಅನಂತರದಲ್ಲಿ ಅವನು, "... ಅನ್ಯಜನರು ನನ್ನ ಬಾಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ ನಂಬಬೇಕೆಂದು ದೇವರು ಬಹಳ ದಿವಸಗಳ ಕೆಳಗೆ ನಿಮ್ಮೊಳಗಿಂದ ನನ್ನನ್ನು ಆರಿಸಿಕೊಂಡದ್ದು ನಿಮಗೇ ತಿಳಿದದೆ. ಮತ್ತು ಹೃದಯವನ್ನು ಬಲ್ಲವನಾಗಿರುವ ದೇವರು ಹೇಗೆ ಪರಿಶುದ್ಧಾತ್ಮನನ್ನು ನಮಗೆ ದಯಪಾಲಿಸಿದನೋ ಹಾಗೆಯೇ ಅವರಿಗೂ ದಯಪಾಲಿಸಿ ಅವರನ್ನು ತನ್ನ ಜನರೆಂದು ಸಾಕ್ಷಿಕೊಟ್ಟನು" (ಅಪೊಸ್ತಲರ ಕೃತ್ಯ 15:7, 8) ಎಂದು ಹೇಳಿದನು. ಅನ್ಯಜನಾಂಗದವರು ಪರಿಶುದ್ಧಾತ್ಮನೊಂದಿಗೆ ಬಲಪಡಿಸಲ್ಪಟ್ಟಾಗ, ದೇವರ ಆಯ್ಕೆಯು, "ನಮ್ಮ ಹಾಗೆಯೇ ಪರಿಶುದ್ಧಾತ್ಮನನ್ನು ಹೊಂದಿದ ಇವರಿಗೆ ನೀರಿನ ಬಾಪ್ತಿಸ್ಮವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ?" (ಅಪೊಸ್ತಲರ ಕೃತ್ಯ 10:47) ಎಂದು ಪೇತ್ರನು ಕೇಳುವದಕ್ಕೆ ಕಾರಣವಾಯಿತು. ಈ ಅಪವಾದದಿಂದ, ಮನುಷ್ಯನಲ್ಲ ಆದರೆ ದೇವರು ಆಯ್ಕೆ ಮಾಡುತ್ತಿದ್ದನು ಎಂಬುದು ಪೇತ್ರನಿಗೆ ಸಾಕಷ್ಟು ರುಜುವಾತು ಆಯಿತು. ದೇವರು ಮಾತ್ರವೇ ತನ್ನ ನಿಯಮಕ್ಕೆ ಅಪವಾದ ಮಾಡಬಹುದು ಮತ್ತು ಅಂಥ ಅಪವಾದವು ದೇವರು ಕಾರ್ಯಮಾಡುತ್ತಿರುವನೆಂಬುದನ್ನು ಸಿದ್ಧಪಡಿಸಿ ತೋರಿಸುವುದು.

ಪೇತ್ರನು ಹೇಳಿದ್ದನ್ನು ಕುರಿತಾಗಿ ಫ್ರೆಡರಿಕ್ ಡೇಲ್ ಬ್ರುನ್ನರ್ ಅವರು ಗಮನಿಸಿದ್ದನ್ನು ಪುನಃ ಹೇಳುವುದು ಯೋಗ್ಯವಾಗಿದೆ: "'ಮೊದಲು ನಮ್ಮ ಮೇಲೆ ಬಂದ ಹಾಗೆಯೇ' (ವಚನ 15) ಪರಿಶುದ್ಧಾತ್ಮನು ಕೊರ್ನೇಲ್ಯನ ಮನೆಯವರ ಮೇಲೆ ಬಂದನು" ಎಂಬುದನ್ನು ಅವನು ಒತ್ತಿ ಹೇಳಿದನು. ಈ ಹೇಳಿಕೆ ಮುಖ್ಯವಾದದ್ದು. "ಪ್ರತಿಯೊಬ್ಬರೊಂದಿಗೆ ಯಾವಾಗಲೂ ಮಾಡಿದಂತೆ ಪರಿಶುದ್ಧಾತ್ಮನು ಕೊರ್ನೇಲ್ಯನ ಮನೆಯವರ ಮೇಲೆ ಬಂದನು" ಎಂದು ಪೇತ್ರನು ಹೇಳುವದಿಲ್ಲ.[1]

ಬ್ರುನ್ನರ್ ಅನಂತರ ಹೀಗೆ ಗಮನಿಸಿದರು, "ಅಕ್ಷರಶಃವಾಗಿ ಹೇಳಬೇಕೆಂದರೆ, 'ಪರಿಶುದ್ಧಾತ್ಮನ ಬಾಪ್ತಿಸ್ಮ ಹೊಂದುವುದು' ಎಂಬುದು ಮುಂದುವರಿದ ಸಭೆಗಾಗಿ ಅಪೊಸ್ತಲರ ಕೃತ್ಯವು ಬೋಧಿಸುವ ಒಂದು ಬೋಧನೆಯಾಗಿರುವದಿಲ್ಲ. ಯಾಕಂದರೆ ಸಭೆಯಲ್ಲಿ ಯೆಹೂದ್ಯರ ಮತ್ತು ಅನ್ಯರ ಬಿಕ್ಕಟ್ಟಿನ ಪ್ರಾರಂಭದಲ್ಲಿ ಮಾತ್ರ ಈ ಮಾತು ಬಂದಿರುತ್ತದೆ."[2]

ಅಪೊಸ್ತಲರ ಕೃತ್ಯಗಳ ಗ್ರಂಥವು ಪರಿಶುದ್ಧಾತ್ಮನ ಬಾಪ್ತಿಸ್ಮದ ಎರಡು ಘಟನೆಗಳನ್ನು ವಿವರಿಸುತ್ತದೆ, ಪಂಚಾಶತ್ತಮ ಹಬ್ಬದ ದಿನದಂದು ಅಪೊಸ್ತಲರು ಸ್ವೀಕರಿಸಿದ್ದು ಹಾಗೂ ಕೊರ್ನೇಲ್ಯನೂ ಅವನ ಕುಟುಂಬದವರೂ ಅವರ ಅನ್ಯಜನಾಂಗದ ಸ್ನೇಹಿತರೂ ಸ್ವೀಕರಿಸಿದ್ದು. ಪೌಲನೂ ಸಹ ಪರಿಶುದ್ಧಾತ್ಮನ ಬಾಪ್ತಿಸ್ಮ ಹೊಂದಿರಬಹುದು. ತಾನು ಮನುಷ್ಯನಿಂದ ಅಲ್ಲ ಆದರೆ ಯೇಸುಕ್ರಿಸ್ತನಿಂದ ಅಪೊಸ್ತಲನಾಗಿದ್ದೇನೆಂದು ಹೇಳಿದ್ದಾನೆ (ಗಲಾತ್ಯ 1:1). ಅವನನ್ನು ಅಪೊಸ್ತಲನನ್ನಾಗಿ ಮಾಡಿದ ಬಲಪಡಿಸುವಿಕೆಯು ಮಾನವ ಮಾಧ್ಯಮದಿಂದ ಬಂದಿದ್ದರೆ, ಆಗ ಅವನು ಮನುಷ್ಯರಿಂದ ಅಪೊಸ್ತಲನಾಗಿ ಮಾಡಿದವನಾಗಿರುತ್ತಿದ್ದನು. ಅವನು ಮಾನವ ಮಧ್ಯಮದಿಂದ ಅಪೊಸ್ತಲನಾಗಿ ಮಾಡಲ್ಪಟ್ಟಿಲ್ಲವೆಂಬುದರಿಂದ, ಅವನಿಗೆ ಪರಿಶುದ್ಧಾತ್ಮನ ಬಾಪ್ತಿಸ್ಮ ಕೊಡುವದರಿಂದ ತನ್ನ

ಅಪೊಸ್ತಲತನಕ್ಕೆ ಅವನಿಗೆ ಯೇಸುವು ತಾನೇ ಅಧಿಕಾರ ಕೊಟ್ಟನೆಂದು ನಾವು ತಿಳಿದು ಕೊಳ್ಳಬೇಕಾಗುತ್ತದೆ.

ಅನ್ಯರು ದೇವರ ಮಕ್ಕಳಾಗುವ ಮೊದಲು ಹಾಗೂ ಅಪೊಸ್ತಲರು ಕೈಗಳನ್ನಿಡುವ ಮೊದಲು (ಸಾಮಾನ್ಯ ನಿಯಮಕ್ಕೆ ಅಪವಾದ) ಪರಿಶುದ್ಧಾತ್ಮನಿಂದ ಬಲವನ್ನು ಹೊಂದಿ ಕೊಂಡರು; ಹೀಗಿದ್ದರೂ, ಬಾಪ್ತಿಸ್ಮ ಹೊಂದಿ ದೇವರ ಮಕ್ಕಳಾಗುವುದರ ಮೊದಲು ಅವರಲ್ಲಿ ಪರಿಶುದ್ಧಾತ್ಮನು ಅಂತರ್ಯದಲ್ಲಿ ವಾಸಿಸಿದ್ದರು ಎಂಬ ಸೂಚನೆ ಇರುವದಿಲ್ಲ. ಮಾನಸಾಂತರ, ಬಾಪ್ತಿಸ್ಮ ಮತ್ತು ಪಾಪಗಳ ಪರಿಹಾರದ ನಂತರ ಪರಿಶುದ್ಧಾತ್ಮ ಎಂಬ ವರವನ್ನು ಹೊಂದಿಕೊಳ್ಳುವ ಸಾಮಾನ್ಯ ನಿಯಮವು (ಅಪೊಸ್ತಲರ ಕೃತ್ಯ 2:38) ಅವರಿಗೂ ಅನ್ವಯಿಸುತ್ತದೆ. ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಪರಿಶುದ್ಧಾತ್ಮ ಎಂಬ ವರವು ನಮೂದಿಸದೇ ಇದ್ದ ಸಂಗತಿಗಳಿಗೂ ಅದು ಅನ್ವಯಿಸುತ್ತದೆ (ಅಪೊಸ್ತಲರ ಕೃತ್ಯ 8:35-39; 16:15, 33; 18:8). ಪರಿಶುದ್ಧಾತ್ಮ ಬಾಪ್ತಿಸ್ಮದ ಎರಡು ಘಟನೆಗಳನ್ನು ಬಿಟ್ಟರೆ, ಪರಿಶುದ್ಧಾತ್ಮನಿಂದ ಬಲಪಡಿಸಲ್ಪಡುವಂಥದ್ದು ಅಪೊಸ್ತಲರು ಹಸ್ತಗಳನ್ನಿಡುವದರ ಮುಖಾಂತರ ಕೊಡಲ್ಪಟ್ಟಿದೆ ಎಂದು ದಾಖಲೆಯಾಗಿದೆ (ಅಪೊಸ್ತಲರ ಕೃತ್ಯ 8:14-17; 19:5, 6; 2 ತಿಮೊಥಿ 1:6).

## ಪರಿಶುದ್ಧಾತ್ಮ ಮತ್ತು ಪರಿವರ್ತನೆ

ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಪಾಪಿಯನ್ನು ಪರಿವರ್ತಿಸಲು ನೇರವಾಗಿ ಅವರ ಮೇಲೆ ಪರಿಶುದ್ಧಾತ್ಮನು ಕಾರ್ಯಮಾಡಿದನು ಎಂಬ ವರದಿ ಇರುವದಿಲ್ಲ. ಆ ಸಮಯದಲ್ಲಿ ಲಿಖಿತ ವಾಕ್ಯವಿರಲಿಲ್ಲ. ಈ ಕಾರಣದಿಂದ ಪರಿಶುದ್ಧಾತ್ಮನಿಂದ ಸತ್ಯದೊಳಗೆ ಮಾರ್ಗದರ್ಶನದ ಅಗತ್ಯತೆ ಯಿದ್ದುದರಿಂದ ಪರಿಶುದ್ಧಾತ್ಮನು ಸಂದೇಶಕರ ಮುಖಾಂತರ ಕಾರ್ಯಸಾಧಿಸಿದನೆಂದು ಹೇಳಲ್ಪಟ್ಟಿದೆ (ಎಫಸ 3:3-5). ಮನವರಿಕೆ ಮಾಡುವ ಪರಿಶುದ್ಧಾತ್ಮನ ಕಾರ್ಯವು (ಯೋಹಾನ 16:7-11) ದೇವರ ವಾಕ್ಯದ ಕಾರ್ಯಾಚರಣೆಯ ಮುಖಾಂತರ ಮಾಡಲ್ಪಟ್ಟಿತು (ಯೋಹಾನ 6:63; ಅಪೊಸ್ತಲರ ಕೃತ್ಯ 2:37; 11:14; 24:25). ಈ ವಾಕ್ಯವು, ಪರಿಶುದ್ಧಾತ್ಮನ ನೇರವಾದ ಕಾರ್ಯವಲ್ಲ, ವಿಶ್ವಾಸದ ತಳಹದಿಯಾಗಿತ್ತು (ಯೋಹಾನ 17:20; ಅಪೊಸ್ತಲರ ಕೃತ್ಯ 17:11, 12; ರೋಮಾಪುರ 10:17).

ಜನರನ್ನು ದೇವರ ಮಕ್ಕಳನ್ನಾಗಿ ಮಾಡುವಲ್ಲಿ ಇಲ್ಲವೇ ಅವರನ್ನು ನಂಬಿಕೆಗೂ ವಿಧೇಯತೆಗೂ ನಡಿಸುವದಕ್ಕಾಗಿ ಪರಿಶುದ್ಧಾತ್ಮನು ಕೊಡಲ್ಪಡಲಿಲ್ಲ. ದೇವರ ಮಕ್ಕಳಾಗಿ ರುವವರಿಗೆ (ಗಲಾತ್ಯ 4:6), ದೇವರ ವಾಕ್ಯದ ಮುಖಾಂತರ ಹುಟ್ಟಿದವರಿಗೆ (1 ಪೇತ್ರ 1:23), ನಂಬಿದವರಿಗೆ (ಯೋಹಾನ 7:39), ಹಾಗೂ ವಿಧೇಯರಾದವರಿಗೆ (ಅಪೊಸ್ತಲರ ಕೃತ್ಯ 5:32) ಆತನು ಕೊಡಲ್ಪಟ್ಟನು.

ಪಾಪಿಯು ವಾಕ್ಯವನ್ನು ಸ್ವೀಕರಿಸಲಿಕ್ಕಾಗುವಂತೆ ಅವನ ಹೃದಯವನ್ನು ತೆರೆಯಲು ಪರಿಶುದ್ಧಾತ್ಮನು ಬರತಕ್ಕದ್ದೆಂದು ಕೆಲವರು ತಿಳಿದು ಕೊಂಡಿದ್ದಾರೆ. ಅಂಥಾ ಹೇಳಿಕೆಯನ್ನು ಪ್ರಥಮ ಅನ್ಯಜನಾಂಗದವರ ಮಾರ್ಪಡುವಿಕೆಯು ತಿರಸ್ಕರಿಸುತ್ತದೆ. ಆತ್ಮನು ಬರುವದಕ್ಕಿಂತ ಮೊದಲೇ ಅವರ ಹೃದಯಗಳು ಆಗಲೇ ತೆರೆದಿದ್ದವು. “ಯಾಕಂದರೆ, ಕರ್ತನು ನಿನಗೆ ಅಪ್ಪಣೆ ಕೊಟ್ಟಿರುವ ಎಲ್ಲಾ ಮಾತುಗಳನ್ನು ಕೇಳುವದಕ್ಕೆ ನಾವೆಲ್ಲರು ಈಗ ದೇವರ ಸನ್ನಿಧಾನದಲ್ಲಿ ಕೂಡಿದ್ದೇವೆ” (ಅಪೊಸ್ತಲರ ಕೃತ್ಯ 10:33) ಎಂದು ಅವರು ಪೇತ್ರನಿಗೆ ಹೇಳಿದರು. ಒಂದು ಹೃದಯವು ಆತನ ಕಾರ್ಯಭಾಗಿಯಾಗಿ

ವಾಕ್ಯದ ಮುಖಾಂತರ ತೆರೆಯಲ್ಪಡಬಹುದು; ಹೀಗಿದ್ದರೂ ಜವಾಬ್ದಾರಿಕೆಯು ತನ್ನ ಹೃದಯದೊಳಗೆ ವಾಕ್ಯವನ್ನು ಬರಲಿಕ್ಕೆ ಬಿಡುವ ಮನುಷ್ಯನ ಮೇಲೆ ಇದೆ (ಲೂಕ 8:15). ಆತ್ಮನು ಸಂದೇಶವಾಹಕನಿಗೆ ಸಂದೇಶ ಕೊಟ್ಟನು. ಆದರೆ ತಪ್ಪಿಹೋದವರ ಮೇಲೆ ಅವರ ಹೃದಯಗಳಲ್ಲಿ ವಿಶ್ವಾಸವು ತುಂಬುವಂತೆ ಆತನು ನೇರವಾಗಿ ಕಾರ್ಯಮಾಡಲಿಲ್ಲ. ಪರಿಶುದ್ಧಾತ್ಮನ ನೇರವಾದ ಕಾರ್ಯದ ಮುಖಾಂತರವಾಗಿ ಅಲ್ಲ ಆದರೆ ಸಂದೇಶದ ಮುಖಾಂತರವಾಗಿ ವಿಶ್ವಾಸವು ಬರುತ್ತದೆ (ರೋಮಾಪುರ 10:17). ಲೋಕವು ಪರಿಶುದ್ಧಾತ್ಮನನ್ನು ಸ್ವೀಕರಿಸುವದಿಲ್ಲ (ಯೋಹಾನ 14:17), ಯಾಕಂದರೆ ನಂಬಿ (ಯೋಹಾನ 7:39), ವಿಧೇಯರಾದವರು (ಅಪೊಸ್ತಲರ ಕೃತ್ಯ 5:32) ಪರಿಶುದ್ಧಾತ್ಮನನ್ನು ಹೊಂದಿದವರು ದೇವರ ಮಕ್ಕಳಾಗಿದ್ದರು (ಗಲಾತ್ಯ 4:6).

ಯಾವುದೇ ವಿಷಯದಲ್ಲಿ ಸತ್ಯವೇದವು ಪರಿಶುದ್ಧಾತ್ಮನ ಚಟುವಟಿಕೆಯನ್ನು ಮಾನಸಿಕ ಅನುಭವದೊಂದಿಗೆ ಸಮಾನವಾಗಿ ಮಾಡಿಲ್ಲ. ಪರಿಶುದ್ಧಾತ್ಮನ ಕಾರ್ಯಕ್ಕಾಗಿ ಅಂಥಾ ವಿಧಾನದೊಂದಿಗಿನ ಪರಿಸ್ಥಿತಿಯ ಮಾನವ ಮನೋಭಾವನೆಗಳ ಚಂಚಲ ಸ್ವಭಾವದ ಮೇಲೆ ಅದು ಕಟ್ಟಲ್ಪಡುವುದು (ಯೆರೆಮೀಯ 17:9). ಅದು ಅವಲಂಭನೆಗೂ ನಂಬಿಕೆಗೂ ಅರ್ಹವಾಗಿರುವದಿಲ್ಲ (ಜ್ಞಾನೋಕ್ತಿ 28:26).

ಕೆಲವರು ತಾವು ಬಾಪ್ತಿಸ್ಮ ಹೊಂದಿದಾಗ ಭಾವೋದ್ರೇಕವನ್ನು ಅನುಭವಿಸದೇ ಇದ್ದುದರಿಂದ ಬಾಪ್ತಿಸ್ಮದ ಅವಶ್ಯಕತೆಯನ್ನು ತೆಗೆದು ಹಾಕುತ್ತಾರೆ. ಇತರರು ಬಾಪ್ತಿಸ್ಮಕ್ಕಿಂತ ಮೊದಲಿನ ಭಾವೋದ್ರೇಕದ ನಿಮಿತ್ತ ಬಾಪ್ತಿಸ್ಮವಿಲ್ಲದೆ ತಾವು ರಕ್ಷಿಸಲ್ಪಟ್ಟಿದ್ದೇವೆಂದು ಭಾವಿಸುತ್ತಾರೆ. ಬಾಪ್ತಿಸ್ಮವು ಯಾವುದೇ ಭಾವೋದ್ರೇಕವನ್ನು ಹುಟ್ಟಿಸುವದಿಲ್ಲ, ಆದರೆ ಆನಂದ ಪಡುವದಕ್ಕೆ ಕಾರಣವನ್ನು ಕೊಡುತ್ತದೆ (ಅಪೊಸ್ತಲರ ಕೃತ್ಯ 8:39; 16:33, 34). ತನ್ನ ಪಾಪಗಳು ಕ್ಷಮಿಸಲ್ಪಟ್ಟಿವೆಯೆಂದು ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟ ಕಾರಣದಿಂದ ಆನಂದವು ಬರುವುದು.

ಮನೋಭಾವನೆಗಳೂ ಬಾಪ್ತಿಸ್ಮವೂ ಮದುವೆಯ ಆಚರಣೆಗೆ ಹೋಲಿಸಲ್ಪಡಬಹುದು. ಆಚರಣೆಯ ಮೊದಲಿನ, ಆಚರಣೆಯ ಸಮಯದಲ್ಲಿಯ, ಮತ್ತು ಅದರ ನಂತರದ ಮನೋ ಭಾವನೆಗಳು ಮದುವೆಗೆ ಮುದ್ರೆ ಹಾಕುವದಿಲ್ಲ. ಆಚರಣೆಯು ಆನಂದ ಪಡುವದಕ್ಕೆ ಕಾರಣವಾಗಿದ್ದರೂ ಆಚರಣೆಯು ತಾನೇ ಮದುಮಕ್ಕಳಲ್ಲಿ ಒಬ್ಬರಿಗೊಬ್ಬರ ಭಾವನೆಗಳನ್ನು ಬದಲಾಯಿಸದಿರಬಹುದು. ಕೆಲವು ಭಾವನೆಗಳಿರು ವಂತದ್ದಲ್ಲ ಆದರೆ ಮದುವೆಯ ಅಗತ್ಯತೆಗಳನ್ನು ಪೂರೈಸುವದು ಮದುವೆಯನ್ನು ಕಾನೂನು ಬದ್ಧವಾಗಿ ಮಾಡುತ್ತದೆ.

ಅದೇ ರೀತಿಯಲ್ಲಿ ಬಾಪ್ತಿಸ್ಮ ಆನಂದಕರವಾದದ್ದಾಗಿರುವುದು. ಆದರೆ ಒಬ್ಬನಿಗೆ ರಕ್ಷಣೆಯ ಭರವಸೆಯ ಹೃದಯ ಪೂರ್ವಕ ಭಾವೋದ್ರೇಕಗಳನ್ನು ಕೊಡುವದೆಂದು ಯಾವುದೇ ಸಂಗತಿಯಲ್ಲಿ ಸತ್ಯವೇದವು ದಾಖಲೆ ಮಾಡಿರುವದಿಲ್ಲ. ರಕ್ಷಣೆಯು ಹೃದಯ ಪೂರ್ವಕವಾದ (ರೋಮಾಪುರ 6:17, 18) ವಿಧೇಯತೆಯ (ಇಬ್ರಿಯ 5:9) ಪರಿಣಾಮವಾಗಿದೆ. ಆದರೆ ಹೃದಯದ ಮೇಲೆ ಪರಿಶುದ್ಧಾತ್ಮನ ನೇರವಾದ ಕಾರ್ಯದ ಪರಿಣಾಮವಾಗಿರುವದಿಲ್ಲ.

## ಮುಕ್ತಾಯ

ನಂಬುವವರಿಗೂ ವಿಧೇಯರಾಗುವವರಿಗೂ ದೇವರ ಮಕ್ಕಳಾದವರಿಗೂ ಪರಿಶುದ್ಧಾತ್ಮನು ಕೊಡಲ್ಪಟ್ಟನು. ತಪ್ಪಿ ಹೋದವರಿಗೆ ಅವರನ್ನು ದೇವರ ಮಕ್ಕಳನ್ನಾಗಿ

ಮಾಡಲು ಆತನು ಕೊಡಲ್ಪಡಲಿಲ್ಲ. ಯಾವ ವ್ಯಕ್ತಿಯ ವಿಶ್ವಾಸವು ತನ್ನ ಜೀವಿತವನ್ನು ಪುನರುಜ್ಜೀವಿಸಲು ಚಲಿಸುವಂತೆ ಮಾಡಿತೋ ಹಾಗೂ ಪಾಪದ ಶುದ್ಧೀಕರಣವನ್ನು ಬಾಪ್ತಿಸ್ಮದಲ್ಲಿ ಹೂಣಿಡಲ್ಪಡುವದರಿಂದ ಯೇಸುವಿಗೆ ಸಮರ್ಪಿಸಿಕೊಂಡಿದ್ದಾರೋ ಅಂಥ ವ್ಯಕ್ತಿಯ ಹೃದಯದಲ್ಲಿ ಆತನು ಪ್ರವೇಶಿಸುತ್ತಾನೆ.

ಪ್ರಾಮಾಣಿಕವಾದ ಮತ್ತು ಯಥಾರ್ಥವಾದ ಹೃದಯವುಳ್ಳ ತಪ್ಪಿ ಹೋದವರು ವಾಕ್ಯದ ಮೂಲಕವಾಗಿ ತಲುಪಲ್ಪಟ್ಟರು (ಲೂಕ 8:15). ಆದರೆ ಮುಚ್ಚಿಹೋದ ಹೃದಯಗಳುಳ್ಳವರು ವಾಕ್ಯವನ್ನು ತಿರಸ್ಕರಿಸುವರು (ಮತ್ತಾಯ 13:15). ಪಾಪಿಯ ಹೃದಯವನ್ನು ತೆರೆಯಲು ಆತ್ಮನು ನೇರವಾಗಿ ಕಾರ್ಯಮಾಡುವದಿಲ್ಲ. ಅದರ ಬದಲಾಗಿ ವಾಕ್ಯಕ್ಕೆ ತೆರೆದಿರುವ ಮತ್ತು ದೇವರ ವಾಕ್ಯಕ್ಕೆ ವಿಧೇಯತೆಯ ಮುಖಾಂತರ ಶುದ್ಧೀಕರಿಸಲ್ಪಟ್ಟ ಹೃದಯದಲ್ಲಿ ಆತನು ಪ್ರವೇಶಿಸುವನು (2 ಪೇತ್ರ 1:22; ಅಪೊಸ್ತಲರ ಕೃತ್ಯ 2:38).

---

ಟಿಪ್ಪಣಿಗಳು

[1]Frederick Dale Bruner, *A Theology of the Holy Spirit* (Grand Rapids, Mich.: Wm. B. Eerdmans Publishing Co., 1970), 194. [2]Ibid., 195.

© 2009 Truth for Today